ಕೌಶಲ್ಯ ವಿಕಾಸ ಭವನ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ನಾಗಾವಿ, ಗದಗ - 582103
Email: swagramafellowship@gmail.com Ph: 0837-2200926

Date: 17-01-2022

**ಆತ್ಮೀಯರೇ,**

**ವಿಷಯ: "ಸ್ವಗ್ರಾಮ ಫೆಲೋಶಿಪ್" ಪ್ರೇರಣಾ ತರಬೇತಿ ಶಿಬಿರಕ್ಕೆ ತಮ್ಮನ್ನು ಆಹ್ವಾನಿಸುವ ಕುರಿತು.**

*****

ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಕಾಲಘಟ್ಟದಲ್ಲಿ ನಮ್ಮ ಗತವೈಭವದ ಇತಿಹಾಸವನ್ನು ಸ್ಮರಿಸುತ್ತಾ, ಮುಂದಿನ 25 ವರ್ಷಗಳ ಅವಧಿಯಲ್ಲಿ ಮಾಡಬೇಕಾದ ಸಾಧನೆಯ ಕುರಿತು ನಾವು ದೀರ್ಘ ಚಿಂತನೆಯಲ್ಲಿ ತೊಡಗಿಸಿಕೊಂಡು ಪ್ರಾಯೋಗಿಕವಾಗಿ ಕಾರ್ಯತತ್ಪರರಾಗಬೇಕಿದೆ. ಭಾರತವು ಗ್ರಾಮಾಧಾರಿತ ದೇಶವಾಗಿದೆ. ಭಾರತದ ಸಮಗ್ರ ವಿಕಾಸದಲ್ಲಿ ಗ್ರಾಮಗಳು ಮಹತ್ವದ ಪಾತ್ರವಹಿಸಬೇಕು. ಗ್ರಾಮಗಳು ಸ್ವಾವಲಂಬನೆಗೆ ಕೃಷಿ, ಲಘು ಉದ್ಯೋಗ ಮತ್ತು ಕರಕುಶಲ, ಆರೋಗ್ಯ ಮತ್ತು ನೈರ್ಮಲ್ಯ, ಸ್ವಯಂ ಆಡಳಿತ, ಬಹಳ ನಿರ್ಣಾಯಕ ಸಂಗತಿಗಳಾಗಿವೆ. ಗ್ರಾಮೀಣಾಭಿವೃದ್ಧಿಯ ಕುರಿತು ಹೊಸ ಒಳನೋಟಗಳನ್ನು ಕಟ್ಟಲು ಹಾಗೂ ಅಸ್ತಿತ್ವದಲ್ಲಿರುವುದಕ್ಕಿಂದ ಉತ್ತಮ ಅಭಿವೃದ್ಧಿಯ ಮಾದರಿಗಳ ನೀಲನಕ್ಷೆಯನ್ನು ರೂಪಿಸುವ ಮಹತ್ವದ ಉದ್ದೇಶದಿಂದ ಕ್ರಿಯಾಶೀಲ ಸಂಸ್ಥೆಗಳನ್ನು ಹಾಗೂ ವ್ಯಕ್ತಿಗಳನ್ನು ಒಟ್ಟಿಗೆ ತರುವ ಮೂಲಕ ಗ್ರಾಮೀಣಾಭಿವೃದ್ಧಿಯ ಮಾದರಿಗಳನ್ನು ನಿರ್ಮಿಸುವ ಕಾರ್ಯಕ್ಕೆ ವಿಶ್ವವಿದ್ಯಾಲಯವು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.

ಆದರ ಭಾಗವಾಗಿ ಪರಸ್ಪರಾವಲಂಬನೆ ಮತ್ತು ಸಹಕಾರದ ಆಧಾರದ ಮೇಲೆ ಸ್ವಾವಲಂಬೀ ಗ್ರಾಮ ನಿರ್ಮಾಣ ಮಾಡುವ ಹಾಗೂ ರಾಷ್ಟ್ರಮಟ್ಟದಲ್ಲಿ ಸಮಗ್ರ ಗ್ರಾಮ ವಿಕಾಸದ ಪರಿಕಲ್ಪನೆಯ ಚೌಕಟ್ಟು ಮತ್ತು ಸಾಧನಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ "ಸ್ವಗ್ರಾಮ ಫೆಲೋಶಿಪ್"ಅನ್ನು ಯೂತ್ ಫಾರ್ ಸೇವಾ, ಪ್ರಜ್ಞಾಪ್ರವಾಹ, ಚಾಣಕ್ಯ ವಿಶ್ವವಿದ್ಯಾಲಯ ಮತ್ತು ಕುವೆಂಪು ವಿಶ್ವವಿದ್ಯಾಲಯದ ಅಬ್ದುಲ್ ನಜೀರ್ ಸಾಬ್ ಅಧ್ಯಯನ ಪೀಠದ ಸಹಯೋಗದೊಂದಿಗೆ ಆರಂಭಿಸಲಾಗಿದೆ. ಈವರೆಗೂ ಸುಮಾರು 2 ತಿಂಗಳ ಕಾಲ ಅರ್ಜಿಗಳನ್ನು ಆಹ್ವಾನಿಸಿ, ಹಂತ–ಹಂತವಾಗಿ ಪರಿಶೀಲಿಸಿ, ಸಂದರ್ಶನ ನಡೆಸಿ ಅದರಲ್ಲಿ ಆಯ್ಕೆಯಾದ 100 ತಂಡಗಳಿಗೆ ದಿನಾಂಕ 21–01–2023 ರಿಂದ 29–01–2023ರವರೆಗೆ **ಸ್ವಗ್ರಾಮ ಫೆಲೋಶಿಪ್ – ಪ್ರೇರಣಾ ತರಬೇತಿ ಶಿಬಿರವನ್ನು** ನಾಗಾವಿಯಲ್ಲಿರುವ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಸ್ವ ತತ್ವದ ಮೇಲೆ ಗ್ರಾಮ ವಿಕಾಸ ಸಾಧಿಸುವ ಉದ್ದೇಶಹೊಂದಿರುವ ಫೆಲೊಶಿಪ್ ಇದಾಗಿದ್ದು ತಾವು ಸದರಿ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಆಗಮಿಸಿ "ಸ್ವಗ್ರಾಮ ಫೆಲೋಶಿಪ್ **ಸ್ವಗ್ರಾಮ ಫೆಲೋಶಿಪ್ – ಪ್ರೇರಣಾ ತರಬೇತಿ ಶಿಬಿರ"** ವನ್ನು ಯಶಸ್ವಿಗೊಳಿಸಬೇಕೆಂದು ತಮ್ಮಲ್ಲಿ ಸವಿನಯ ಮನವಿಮಾಡಿಕೊಳ್ಳುತ್ತೇವೆ.

ವಂದನೆಗಳೊಂದಿಗೆ ತಮ್ಮ ಆಗಮನಾಕಾಂಕ್ಷೆಯಲ್ಲಿ,

**ಶ್ರೀ ಲಿಂಗರಾಜ್ ನಿಡುವಣಿ** **ಶ್ರೀ ಅಭಿಷೇಕ್ ಹೆಚ್. ಈ.**

**ಸಂಯೋಜಕರು, ಸ್ವಗ್ರಾಮ ಫೆಲೋಶಿಪ್**

**ಕಾರ್ಯಕಾರಿ ಸಮಿತಿ, ಸ್ವಗ್ರಾಮ ಫೆಲೋಶಿಪ್**

## ಕಾರ್ಯಕ್ರಮದ ವಿವರ ಈ ಕೆಳಕಂಡಂತಿದೆ.

---

**ದಿನಾಂಕ: 21 ಜನವರಿ 2023 ರಿಂದ ದಿನಾಂಕ 29-01-2023ರವರೆಗೆ**

**ಸ್ಥಳ: ಕೌಶಲ್ಯ ವಿಕಾಸ ಭವನ**

**ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ,**
**ನಾಗಾವಿ, ಗದಗ.**

**ಮಾಹಿತಿಗಾಗಿ ಸಂಪರ್ಕಿಸಿ**

**ಶ್ರೀ ಲಿಂಗರಾಜು ನಿಡುವಣಿ: 8050501377**

**ಡಾ. ವಿಜಯ್‌ನಾಯ್ಕ ಎಲ್: 9686170247**

Karnataka State Rural Development and Panchayat Raj University Gadag
https://maps.google.com/maps/search/Karnataka%20State%20Rural%20Development%20and%20Panchayat%20Raj%20University%20Gadag/@15.368593215942383,75.60601043701172,17z?hl=en

**ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ**
**ಯೂತ್ ಫಾರ್ ಸೇವಾ, ಬೆಂಗಳೂರು, ಪ್ರಜ್ಞಾ ಪ್ರವಾಹ, ಕರ್ನಾಟಕ**
**ಚಾಣಕ್ಯ ವಿಶ್ವವಿದ್ಯಾಲಯ, ಬೆಂಗಳೂರು**
**ಅಬ್ದುಲ್ ನಜೀರ್ ಸಾಬ್ ಅಧ್ಯಯನ ಪೀಠ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ**
ಇವರ ಸಂಯುಕ್ತಾಶ್ರಯದಲ್ಲಿ

# ಸ್ವಗ್ರಾಮ ಫೆಲೋಶಿಪ್
ನಮ್ಮ ಗ್ರಾಮ ನಮ್ಮ ಹೆಮ್ಮೆ

# ಪ್ರೇರಣಾ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ

ದಿ. 21-01-2023 ಮುಂಜಾನೆ 11.00 ಗಂ. ಸ್ಥಳ : ಕೆ.ಎಸ್.ಆರ್.ಡಿ.ಪಿ.ಆರ್.ಯು., ಕೌಶಲ್ಯ ವಿಕಾಸ ಭವನ ಸಭಾಂಗಣ, ನಾಗಾವಿ, ಗದಗ

ಮುಖ್ಯ ಅತಿಥಿಗಳು: **ಡಾ. ವೇದವ್ಯಾಸ ಎಂ. ದೇಶಪಾಂಡೆ**
ವೈದ್ಯರು ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಹೆಬ್ಬಳ್ಳಿ, ಧಾರವಾಡ

ಆಶಯ ನುಡಿ : **ಶ್ರೀ ರಾಘವೇಂದ್ರ ಕಾಗವಾಡ**
ಪ್ರಾಂತ ಕಾರ್ಯವಾಹ, ರಾಷ್ಟ್ರೀಯ ಸ್ವಯಂಸೇವಕ ಸಂಘ, ಕರ್ನಾಟಕ ಉತ್ತರ

ಅಧ್ಯಕ್ಷತೆ : **ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ**
ಮಾನ್ಯ ಕುಲಪತಿಗಳು, ಕ.ರಾ.ಗ್ರಾ ಮತ್ತು ಪಂ.ರಾ ವಿಶ್ವವಿದ್ಯಾಲಯ, ಗದಗ

ಉಪಸ್ಥಿತರು : **ಶ್ರೀ ವೆಂಕಟೇಶ ಮೂರ್ತಿ**
ಸ್ಥಾಪಕರು ಮತ್ತು ಮುಖ್ಯ ಮಾರ್ಗದರ್ಶಕರು, ಯೂತ್ ಫಾರ್ ಸೇವಾ, ಬೆಂಗಳೂರು
**ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ.**
ಕುಲಸಚಿವರು, ಕ.ರಾ.ಗ್ರಾ ಮತ್ತು ಪಂ.ರಾ ವಿಶ್ವವಿದ್ಯಾಲಯ, ಗದಗ
**ಶ್ರೀ ಪ್ರಶಾಂತ್ ಜೆ. ಸಿ.**
ವಿತ್ತಾಧಿಕಾರಿಗಳು, ಕ.ರಾ.ಗ್ರಾ ಮತ್ತು ಪಂ.ರಾ ವಿಶ್ವವಿದ್ಯಾಲಯ, ಗದಗ

**9 ದಿನದ ಪ್ರೇರಣಾ ತರಬೇತಿ ಶಿಬಿರ**
**21 ರಿಂದ 29 ಜನವರಿ, 2023**

## ಸ್ವಗ್ರಾಮ ಮಿತ್ರರಿಗೆ ಸ್ವಾಗತ

ಶ್ರೀ ಲಿಂಗರಾಜ ನಿಡುವಣಿ    ಶ್ರೀ ಅಭಿಷೇಕ್ ಹೆಚ್. ಈ.
ಸಂಯೋಜಕರು, ಸ್ವಗ್ರಾಮ ಫೆಲೋಶಿಪ್
**ಸ್ವಗ್ರಾಮ ಫೆಲೋಶಿಪ್ ಕಾರ್ಯಕಾರಿ ಸಮಿತಿ**

## ಪ್ರೇರಣಾ ತರಬೇತಿ ಶಿಬಿರದ ಕಾರ್ಯಕ್ರಮ ಪಟ್ಟಿ

| | |
|---|---|
| ಗೋ-ಪೂಜೆ | **ಮುಖ್ಯ ಅತಿಥಿಗಳಿಂದ** |
| ನೃತ್ಯರೂಪಕ | **ಶ್ರೀಮತಿ ಶ್ವೇತಾ ಸೊಂಡೂರ**<br>ಉಪನ್ಯಾಸಕರು, ಬಿ.ಕಾಂ. ವಿಭಾಗ<br>ಕ.ರಾ.ಗ್ರಾ. ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ |
| ಸ್ವಾಗತ | **ಪ್ರೊ. ಬಸವರಾಜ ಎಲ್. ಲಕ್ಕಣ್ಣವರ**<br>ಕುಲಸಚಿವರು,<br>ಕ.ರಾ.ಗ್ರಾ. ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ |
| ಉದ್ಘಾಟನೆ | **ಮುಖ್ಯ ಅತಿಥಿಗಳಿಂದ** |
| ಪ್ರಾಸ್ತಾವಿಕ ನುಡಿ | **ಡಾ. ಪ್ರಕಾಶ ಭಟ್**<br>ಶಿಬಿರಾಧಿಕಾರಿಗಳು, ಪ್ರೇರಣಾ ತರಬೇತಿ ಶಿಬಿರ |
| ಮುಖ್ಯ ಅತಿಥಿಗಳ ನುಡಿ | **ಡಾ. ವೇದವ್ಯಾಸ ಎಂ. ದೇಶಪಾಂಡೆ**<br>ವೈದ್ಯರು ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು,<br>ಹೆಬ್ಬಳ್ಳಿ ಧಾರವಾಡ |
| ಆಶಯ ನುಡಿ | **ಶ್ರೀ ರಾಘವೇಂದ್ರ ಕಾಗವಾಡ**<br>ಪ್ರಾಂತ ಕಾರ್ಯವಾಹಕರು,<br>ರಾಷ್ಟ್ರೀಯ ಸ್ವಯಂಸೇವಕ ಸಂಘ, ಕರ್ನಾಟಕ ಉತ್ತರ |
| ಅಧ್ಯಕ್ಷತೆ | **ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ**<br>ಮಾನ್ಯ ಕುಲಪತಿಗಳು,<br>ಕ.ರಾ.ಗ್ರಾ. ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ |
| ವಂದನಾರ್ಪಣೆ | **ಶ್ರೀ ಲಿಂಗರಾಜ್ ನಿಡುವಣಿ**<br>ಸಂಯೋಜಕರು, ಸ್ವಗ್ರಾಮ ಫೇಲೊಶಿಪ್ |
| ನಿರೂಪಣೆ | **ಶ್ರೀ ಚಂದ್ರಪ್ಪ ಬಾರಂಗಿ**<br>ಉಪನ್ಯಾಸಕರು, ಕನ್ನಡ ವಿಭಾಗ<br>ಕ.ರಾ.ಗ್ರಾ. ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ |

**ಬನ್ನಿ ಸ್ವಾವಲಂಬಿ ಗ್ರಾಮ ಸ್ವರಾಜ್ಯದ ಮೂಲಕ ಆತ್ಮನಿರ್ಭರ ಭಾರತದ ನವನಿರ್ಮಾಣದ ಹೊಸ ಮನ್ವಂತರಕ್ಕೆ ಸಂಕಲ್ಪ ಮಾಡೋಣ.**